## ಮಾತು-ಕತೆ

◆ **ಅಧ್ಯಾಪಕರಾಗಿ ನಿಮ್ಮ ಅನುಭವಗಳು? ಅಧ್ಯಾಪನ ನಿಮಗೆ ಬಹಳ ಪ್ರಿಯವಾದುದುದು. ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಮೇಷ್ಟ್ರು ನೀವು. ಆದರೆ ಕೆ.ಜಿ.ಎನ್. ತರಾ ಮೇಷ್ಟ್ರಾಗಬೇಕು ಅಂತ ವಿದ್ಯಾರ್ಥಿಗಳು ಅಂದುಕೊಳ್ತಾ ಇದ್ರು.**

ನನ್ನ ದೇಹ, ಮನಸಿನ ಆರೋಗ್ಯದ ಮೂಲವೇ ನನ್ನ ಅಧ್ಯಾಪನ ಮತ್ತು ವಿದ್ಯಾರ್ಥಿಗಳು. ವಿದ್ಯಾರ್ಥಿಗಳು ಅಂದರೆ ನನಗೆ ಪ್ರಾಣ, ಅವರೇ ನನ್ನ ಜೀವನ. ಎಲ್ಲರೂ ನನ್ನನ್ನು ಕೇಳ್ತಾರೆ, 'ಯಾಕೆ ನೀವು ತಡವಾಗಿ ಬರವಣಿಗೆ ಆರಂಭ ಮಾಡಿದ್ರಿ' ಅಂತ. ನನಗೆ ಪಾಠ ಮಾಡೋದು ಎಷ್ಟು ಪ್ರೀತಿಯದು ಅಂದರೆ, ಅಲ್ಲೇ ನನ್ನ ಎಲ್ಲ ವಿಚಾರಗಳನ್ನು ಹಂಚಿಕೊಂಡು ಬಿಡ್ತಾ ಇದ್ದೆ, ಬರೆಯುವ ಒತ್ತಡವೇ ಇರ್ತಾ ಇರಲಿಲ್ಲ. ಈಗಲೂ ವಿದ್ಯಾರ್ಥಿಗಳು ನನ್ನ ಜೊತೆ ಸಂಪರ್ಕದಲ್ಲಿದ್ದಾರೆ. ಬುದ್ಧಿವಂತರಿಗಿಂತ ದಾರಿ ಬಿಟ್ಟ ವಿದ್ಯಾರ್ಥಿಗಳು ನನ್ನ ಆದ್ಯತೆಯಾಗಿರ್ತಾ ಇದ್ದರು.

ಸಿದ್ಧತೆ ಇಲ್ಲದೆ ಯಾವತ್ತೂ ನಾನು ತರಗತಿಗೆ ಹೋಗ್ತಾ ಇರಲಿಲ್ಲ. ತುಮಕೂರಿನಿಂದ ಶನಿವಾರ–ಭಾನುವಾರ ಬೆಂಗಳೂರಿಗೆ ಬುತ್ತಿ ತಗೊಂಡು ಬಂದು, ಲೈಬ್ರರಿಗಳಲ್ಲಿ ಓದ್ತಿದ್ದೆ ನಾನು. 'ಸಮಕಾಲೀನ ವೇದಿಕೆ' ಅಂತ ಒಂದು ವೇದಿಕೆ ಕಟ್ಟಿ, ಮೂರು ತಲೆಮಾರಿನವರು ಅದರಲ್ಲಿ ಭಾಗವಹಿಸುವಂತೆ ಮಾಡಿದ್ದೆ. ಅಲ್ಲಿ ಮಂಡಿಸಿದ ಪ್ರಬಂಧಗಳನ್ನೆಲ್ಲ ಸೇರಿಸಿ 'ಸಾಮಾಜಿಕ ನಿಲುವುಗಳು' ಅಂತ ಪುಸ್ತಕ ಮಾಡಿದೆ. ಬಹು ಜನರ ಮೆಚ್ಚುಗೆಗೆ ಇದು ಪಾತ್ರವಾಗಿತ್ತು.

◆ **ನೀವು ತಂತ್ರವನ್ನು ಆಳವಾಗಿ ಅಭ್ಯಾಸ ಮಾಡಿದವರು. ಅವೈದಿಕತೆಯ ಶಕ್ತಿ ಕೇಂದ್ರವಾಗಿ ತಂತ್ರವನ್ನು ಸ್ಥಾಪಿಸುವುದು ನಿಮ್ಮ ಉದ್ದೇಶ ಅಲ್ವಾ? ಇದನ್ನ ಸ್ವಲ್ಪ ವಿವರಿಸಿ.**

ತಂತ್ರ ಪದ್ಧತಿಯು ನಿಸ್ಸಂದೇಹವಾಗಿ ಶೂದ್ರರು ವೈದಿಕತೆಗೆ ಒಡ್ಡಿದ ಪ್ರತಿರೋಧ. ಮಾತ್ರವಲ್ಲ, ಅದು ಅವರದ್ದೇ ಆದ ಮೀಮಾಂಸೆ ಮತ್ತು ಕಾರ್ಯತಂತ್ರವನ್ನೂ ಒಳಗೊಂಡಿದೆ. ಇದು ವೈದಿಕರ ಯಜ್ಞ ಯಾಗಾದಿಗಳಿಗೆ ಹೋಲಿಸಿದರೆ, ಆಚರಣೆಯಲ್ಲಿ ಸರಳ, ಮತ್ತು ಮಿತವ್ಯಯದ್ದು. ಇದು 'ಜನಸಂಸ್ಕೃತಿ'ಯನ್ನು ಪ್ರತಿನಿಧಿಸುವಂಥದ್ದು. ಆದ್ದರಿಂದ ಸಹಜವಾಗಿಯೇ ಬಹುಸಂಸ್ಕೃತಿಯ ವೈವಿಧ್ಯತೆ, ಜೀವಂತಿಕೆ ಮತ್ತು ವಿಸ್ತಾರವನ್ನು ಒಳಗೊಂಡಿದೆ. ಶ್ರೀಸಾಮಾನ್ಯನೂ ಇದನ್ನು ಪಾಲಿಸುವುದು ಸಾಧ್ಯ.

ಆದರೆ ನೋಡಿ, ಏಕಸ್ವಾಮ್ಯವನ್ನು ಯಾವತ್ತಿನಿಂದಲೂ ಶೂದ್ರರ ಮೇಲೆ ಹೇರುತ್ತಾ ಬಂದ ವೈದಿಕ ಭಕ್ತ ಪರಂಪರೆ ಇದನ್ನೂ ಮ್ಯಾನಿಪ್ಯುಲೇಟ್ ಮಾಡುವುದರಲ್ಲಿ ತಕ್ಕಮಟ್ಟಿನ ಯಶಸ್ಸು ಕಂಡಿದೆ. ಶಂಕರಾಚಾರ್ಯರು ಶ್ರೀಚಕ್ರವನ್ನು ವೈದಿಕತೆಯ ಸಂಕೇತ ಮಾಡುವುದರ ಮೂಲಕ ಅದರ ಮೇಲೂ ತಮ್ಮ ಹಿಡಿತವನ್ನು ಸಾಧಿಸಲು ಪ್ರಯತ್ನಿಸಿದ್ದಾರೆ.

◆ **ತಂತ್ರವನ್ನು ಕುರಿತ ನಿಮ್ಮ ಕೃತಿಯನ್ನು ನಾವೆಲ್ಲ ಬಹಳ ಕುತೂಹಲದಿಂದ ಕಾಯ್ತಾ ಇದ್ದೇವೆ...**

ಆದಷ್ಟು ಬೇಗ ಬರೆದು ಮುಗಿಸಬೇಕು ಅನ್ನುವ ಆಸೆ ನನಗೂ ಇದೆ. ಸಾಕಷ್ಟು ವರ್ಷಗಳಿಂದ ಈ ಬಗ್ಗೆ ಅಧ್ಯಯನ ಮಾಡಿದ್ದೀನಿ. ಸಾಕಷ್ಟು ವಿಷಯ ಸಂಗ್ರಹಣೆಯೂ ಆಗಿದೆ. ಬರೆಯುವೆ.

### ಎಂ.ಎಸ್. ಆಶಾದೇವಿ

ವಿಮರ್ಶಕಿ, ಅನುವಾದಕಿ ಎಂ.ಎಸ್. ಆಶಾದೇವಿ ವೃತ್ತಿಯಲ್ಲಿ ಅಧ್ಯಾಪಕರು. 'ಸ್ತ್ರೀಮತವನುತ್ತರಿಸಲಾಗದೆ?', 'ನಾರಿಕೇಳಾ', 'ಬೆಳಕಿಗಿಂತ ಬೆಳ್ಳಗೆ' ಅವರ ಕೆಲವು ಕೃತಿಗಳು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.